<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,</u>

ಶ್ರೀರಂಗಪಟ್ಟಣ.

ಸಿ.ಸಿ.ಃ 344/2013

ಪಿ. ಡಬ್ಲ್ಯುಃ 07

ಸಿ. ಡಬ್ಲ್ಯುಃ 01

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಪೂಣಚ್ಚ.ಎನ್.ಎಂ. |
| ತಂದೆ/ಪತಿಯ ಹೆಸರು | ಃ | ಎನ್.ಕೆ.ಮಂದಣ್ಣ |
| ವಯಸ್ಸು | ಃ | 50 ವರ್ಷ |
| ವೃತ್ತಿ | ಃ | ಮೈಸೂರು ಪೋಲೀಸ್ ತರಬೇತಿ ಕೇಂದ್ರದಲ್ಲಿ ಇನ್ಸ್ ಪೆಕ್ಟರ |
| ವಾಸ | ಃ | ಮೈಸೂರು |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 06.03.2023

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ನಾನು 11.09.2012 ರಿಂದ 08.03.2014 ವರೆಗೆ ಅರಕೆರೆ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 15.08.2013 ರಂದು ಸಂಜೆ 04.30 ಸಮಯದಲ್ಲಿ ನಾನು ಠಾಣೆಯಲ್ಲಿದ್ದಾಗ ಬಾತ್ಮಿದಾರರಿಂದ ಬಂದ ಮಾಹಿತಿ ಏನೆಂದರೆ ಗಾಮನಹಳ್ಳಿ ಗ್ರಾಮದ ಚೆನ್ನಪ್ಪ ಪೆಟ್ಟಿ ಅಂಗಡಿಯಲ್ಲಿ ಚೆನ್ನಪ್ಪ ಎನ್ನುವವರು ಅಕ್ರಮವಾಗಿ ಮದ್ಯವನ್ನು ಇಟ್ಟುಕೊಂಡು ಹೆಚ್ಚಿನ ಬೆಲೆಗೆ ಪರವಾನಿಗೆ ಇಲ್ಲದೇ ಮಾರಾಟ ಮಾಡುತ್ತಿದ್ದಾರೆ ಎನ್ನುವ ಬಗ್ಗೆ ಮಾಹಿತಿ ಬಂದಿದ್ದು ಈ ಸಂಬಂಧ ದಾಳಿ ಮಾಡುವ ಬಗ್ಗೆ ನಮ್ಮ ಠಾಣೆಗೆ ಬಂದಿದ್ದ ಚೆನ್ನೇಗೌಡ ಹಾಗೂ ಪ್ರಕಾಶ್ ಎನ್ನುವವರಿಗೆ ದಾಳಿ ಮಾಡುವ ಕಾಲಕ್ಕೆ ಪಂಚರಾಗಿ ಸಹಕರಿಸುವಂತೆ ಕೋರಿ ಕೊಂಡಿದ್ದು ಅವರು ಒಪ್ಪಿಕೊಂಡ ಕಾರಣ ಅವರಿಗೆ ನೋಟೀಸ್ ಜಾರಿ ಮಾಡಿ ನಂತರ ನಮ್ಮ ಸಿಬ್ಬಂದಿರವರಾದ ಚೌಡಯ್ಯ, ರವಿ, ಆನಂದ ಹಾಗೂ ಶ್ರೀನಿವಾಸ ರವರನ್ನುಕರೆದುಕೊಂಡು ಪಂಚರೊಂದಿಗೆ ನಮ್ಮ ಇಲಾಖಾ ಜೀಪ್ ನಲ್ಲಿ ಸಂಜೆ 04.45 ಠಾಣೆಯನ್ನು ಬಿಟ್ಟು ಗಾಮನಹಳ್ಳಿ ಗ್ರಾಮಕ್ಕೆ ಸುಮಾರು 05.15 ಕ್ಕೆ ತಲುಪಿದ್ದೇವು.

ಚೆನ್ನಪ್ಪನ ಅಂಗಡಿಯಿಂದ ಸ್ವಲ್ಪ ದೂರದಲ್ಲಿ ನಮ್ಮಇಲಾಖಾ ಜೀಪ್ ಅನ್ನು ನಿಲ್ಲಿಸಿ ನೋಡಿದಾಗ ಅಂಗಡಿಯ ಮುಂಭಾಗದಲ್ಲಿ ಯಾರೋ ಇಬ್ಬರು ಆಸಾಮಿಗಳು ಚೆನ್ನಪ್ಪನ ಅಂಗಡಿಯಿಂದ ಮದ್ಯದ ಬಾಟಲಿಗಳನ್ನು ಪಡೆದುಕೊಂಡು ಲೋಟಕ್ಕೆ ಹಾಕಿಕೊಂಡು

ಸೇವಿಸುತ್ತಿದುದ್ದು ಕಂಡುಬಂದಿತ್ತು. ಸದರಿ ಆಸಾಮಿಗಳು ನಮ್ಮನ್ನು ನೋಡಿ ಅಲ್ಲಿಂದ ಓಡಿ ಹೋಗಿರುತ್ತಾರೆ.

ನಂತರ ನಾನು ಹಾಗೂ ನನ್ನ ಸಿಬ್ಬಂದಿಗಳು ಪೆಟ್ಟಿ ಅಂಗಡಿ ಹತ್ತಿರ ಹೋಗಿ ನೋಡಲಾಗಿ ಅಲ್ಲಿ ಎರಡು ಬಾಟಲಿಗಳು ಇರುವುದು ಕಂಡು ಬಂದಿದ್ದು ಅವುಗಳಲ್ಲಿ ಅರ್ಧ ಮದ್ಯ ತುಂಬಿದ್ದು ಕಂಡು ಬಂದಿತ್ತು. ಸದರಿ ಮದ್ಯದ ಬಾಟಲಿಗಳ ಮೇಲೆ ಎಂ.ಆರ್.ಪಿ.37.79 ರೂಪಾಯಿಗಳು ಎಂದು ನಮೂದಾಗಿದ್ದು ಅದರ ಬ್ಯಾಚ್ ನಂಃ 06021112 ಎಂದು ನಮೂದಾಗಿತ್ತು.

ಅಂಗಡಿಯಲ್ಲಿ ಕುಳಿತಿದ್ದ ಒಬ್ಬ ವ್ಯಕ್ತಿಯನ್ನು ವಿಚಾರಿಸಿದಾಗ ಆತನು ತನ್ನ ಹೆಸರನ್ನು ಚೆನ್ನಪ್ಪ ಎಂದು ತಿಳಿಸಿರುತ್ತಾನೆ. ಆತನನ್ನು ಮದ್ಯ ಮಾರಾಟ ಮಾಡುವ ಬಗ್ಗೆ ಪರವಾನಿಗೆ ಇರುವುದರ ಬಗ್ಗೆ ವಿಚಾರಿಸಿದಾಗ ಇರುವುದಿಲ್ಲ ಎಂದು ತಿಳಿಸಿರುತ್ತಾನೆ.

ನಂತರ ನಾನು ಮತ್ತು ನಮ್ಮ ಸಿಬ್ಬಂದಿಗಳು ಪಂಚರ ಸಮಕ್ಷಮ ಅಂಗಡಿಯನ್ನು ಅಜಮಾಯಿಷಿ ನೋಡಿದಾಗ ಅಂಗಡಿಯ ಮೇಲ್ಭಾಗದಲ್ಲಿ ಒಂದು ರಟ್ಟಿನ ಬಾಕ್ಸ ಇರುವುದು ಕಂಡುಬಂದಿತ್ತು. ಸದರಿ ಬಾಕ್ಸ ಅನ್ನು ಕೆಳಗೆ ಇಳಿಸಿ ನೋಡಿದಾಗ ಅದರಲ್ಲಿ 44 ಮದ್ಯ ತುಂಬಿದ ಬಾಟಲಿಗಳು ಇರುವುದು ಕಂಡುಬಂದಿತ್ತು. ಸದರಿ ಮದ್ಯ ತುಂಬಿದ ಬಾಟಲಿಗಳ ಮೇಲೆ ಸೂಪರ್ ಜಾಕ್ ಫೈನ್ ಬ್ರಾಂದಿ ಎಂದು ನಮೂದಗಿತ್ತು. ಸದರಿ ಬಾಟಲಿಗಳು 180 ಎಂ.ಎಲ್ ಅಳತೆಯವು ಆಗಿದ್ದವು. ಪ್ರತಿ ಬಾಟಲಿಗಳ ಮುಚ್ಚಳದ ಮೇಲೆ ಸೀಲ್ ಮಾಡಲಾಗಿತ್ತು.

ನಂತರ ಪಂಚರ ಸಮಕ್ಷಮ ಮಹಜರ್ ಕ್ರಮವನ್ನು ಸಂಜೆ 05.30-06.15 ವರೆಗೆ ಜರುಗಿಸಿರುತ್ತೇನೆ. ಅಮಾನತ್ತು ಪಡಿಸಿಕೊಂಡ ಬಾಟಲಿಗಳ ಪೈಕಿ ರಾಸಾಯನಿಕ ಪರೀಕ್ಷೆಗೆ ಕಳುಹಿಸುವ ಸಲುವಾಗಿ 4 ಬಾಟಲಿಗಳನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಎಸ್ ಎಂಬ ಅಕ್ಷರದಿಂದ ಸೀಲ್ ಮಾಡಿ ನಮ್ಮ ವಶಕ್ಕೆ ಪಡೆದಿರುತ್ತೇನೆ.

ನಂತರ ಆರೋಪಿ ಚೆನ್ನಪ್ಪನನ್ನು ನಮ್ಮ ವಶಕ್ಕೆ ಪಡೆದು ಇಲಾಖಾ ಜೀಪ್ ನಲ್ಲಿ ಪಂಚರೊಂದಿಗೆ ಕೂರಿಸಿಕೊಂಡು ಠಾಣೆಗೆ ಹೊರಟಿದ್ದು ಸ್ವಲ್ಪ ದೂರ ಬರುತ್ತಿದ್ದಂತೆ ಗಾಮನಹಳ್ಳಿ ಗ್ರಾಮದ ಕೆಲವು ಸಾರ್ವಜನಿಕರುನಮ್ಮ ಜೀಪ್ ಅನ್ನು ಅಡ್ಡಗಟ್ಟಿ ನಿಲ್ಲಿಸಿ ನಮ್ಮ ಊರಿನಲ್ಲಿ ನಾವು ಯಾವ ರೀತಿಯಾದರೂ ಮಾರಾಟ ಮಾಡುತ್ತೇವೆ ಅದನ್ನು ಕೇಳಲು ನೀವು ಯಾರು ? ನಮ್ಮ ಗ್ರಾಮಕ್ಕೆ ನೀವು ಬರಬಾರದು ಹಾಗೂ ಈಗ ನೀವು ಸೀಜ್ ಮಾಡಿರುವ ಮದ್ಯದ ಬಾಟಲಿಗಳನ್ನು ಮತ್ತು ಚೆನ್ನಪ್ಪನನ್ನು ಈಗಿಂದ ಈಗಲೇ ಕೆಳಗೆ ಇಳಿಸದಿದ್ದರೇ ನಾವೇ ಬಲವಂತವಾಗಿ ಕೆಳಗೆ ಇಳಿಸುತ್ತೇವೆಂದು ಹೇಳುತ್ತಾ ನಮಗೆ ಅವಾಚ್ಯ ಶಬ್ದಗಳಿಂದ ಬೋಳಿ ಮಕ್ಕಳ, ಸೂಳೆ ಮಕ್ಕಳ ಎಂದು ಬೈದಿರುತ್ತಾರೆ.

ನಾವು ಅಲ್ಲಿದ್ದ ಸಾರ್ವಜನಿಕರನ್ನು ಕಾನೂನು ಕ್ರಮ ನಾವು ತೆಗೆದುಕೊಳ್ಳಲು ಸಹಕರಿಸಿ ಎಂದು ಕೇಳಿಕೊಂಡರೂ ಕೂಡ ಅವರು ನಮ್ಮ ಮನವಿಯನ್ನು ಲೆಕ್ಕಿಸಿರುವುದಿಲ್ಲ. ಅಷ್ಟರಲ್ಲಿ ಏಕಾಏಕಿ ಇಬ್ಬರು ಆಸಾಮಿಗಳು ಅಲ್ಲಿಗೆ ಬಂದು ನಮ್ಮ ಜೀಪ್ ನ ಚಾಲಕ ಶ್ರೀನಿವಾಸ ರವರ ಕತ್ತಿನ ಪಟ್ಟಿ ಹಿಡಿದು ಬಲವಂತದಿಂದ ಅವರನ್ನು ಜೀಪ್ ನಿಂದ ಕೆಳಗೆ ಇಳಿಸಿ ಆತನಿಗೆ ಹೊಡೆದು ತಳ್ಳಿರುತ್ತಾರೆ.

ಅಲ್ಲಿದ್ದ ಇನ್ನೊಬ್ಬ ವ್ಯಕ್ತಿ ನನ್ನ ಕತ್ತಿನ ಪಟ್ಟಿ ಹಿಡಿದು ನನ್ನನ್ನು ಜೀಪ್ ನಿಂದ ಕೆಳಗೆ ಇಳಿಸಿ ಎಳೆದಾಡಿರುತ್ತಾರೆ. ಆಗ ನನ್ನ ಕಿವಿಯ ಹತ್ತಿರ ತರಚಿದ ಗಾಯ ಸಹ ಆಗಿತ್ತು.

ನಮ್ಮ ಸಿಬ್ಬಂದಿ ಚೌಡಯ್ಯ ಎನ್ನುವವರಿಗೆ ಆರೋಪಿ ಚೆನ್ನಪ್ಪ ಕಬ್ಬಿಣ್ಣದ ಬಟ್ಟಿನಿಂದ ಹಣೆಗೆ ಹೊಡೆದಿರುತ್ತಾರೆ ಅದರಿಂದ ಚೌಡಯ್ಯನವರಿಗೆ ರಕ್ತಗಾಯ ಸಹ ಆಗಿತ್ತು.

ನಮ್ಮ ಸಿಬ್ಬಂದಿಯವರಾದ ರವಿ ಮತ್ತು ಆನಂದ ರವರಿಗೂ ಸಹ ಅಲ್ಲಿದ್ದ ವ್ಯಕ್ತಿಗಳು ಹೊಡೆದು ಅವರು ಧರಿಸಿದ್ದ ಸಮವಸ್ತ್ರವನ್ನು ಹರಿದು ಹಾಕಿರುತ್ತಾರೆ. ಅಲ್ಲಿದ್ದ ಜನರು ನಮಗೆ ಇವರನ್ನು ಊರಿನಿಂದ ಹೋಗಲು ಬಿಡಬಾರದು ಇವರನ್ನು ಜೀಪ್ ನ ಸಮೇತ ಸುಟ್ಟು ಹಾಕಿಬಿಡೋಣವೆಂದು ಬೆದರಿಕೆ ಕೂಡ ಹಾಕಿರುತ್ತಾರೆ. ನಮ್ಮ ಜೀಪ್ ನಲ್ಲಿದ್ದ ಆರೋಪಿ ಚೆನ್ನಪ್ಪನನ್ನು ಬಲವಂತದಿಂದ ಕೆಳಗೆ ಇಳಿಸಿಕೊಂಡಿರುತ್ತಾರೆ.

ತಕ್ಷಣ ನಮ್ಮ ಇಲಾಖಾ ಜೀಪ್ ಚಾಲಕ ಶ್ರೀನಿವಾಸ ಜೀಪ್ ಅನ್ನು ಅಲ್ಲಿಂದ ಚಾಲನೆ ಮಾಡಿಕೊಂಡು ನನ್ನನ್ನು, ನನ್ನ ಸಿಬ್ಬಂದಿ ಹಾಗೂ ಪಂಚರನ್ನು ಅದರಲ್ಲಿ ಕೂರಿಸಿಕೊಂಡು ಹೊರಟು ಬಂದಿರುತ್ತಾರೆ. ನಂತರ ನಾವು ನೇರ ಅರಕೆರೆ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದು ಅಲ್ಲಿ ಚಿಕಿತ್ಸೆ ಪಡೆದು ನಂತರ ಠಾಣೆಗೆ ಬಂದು ನಾನು ದೂರನ್ನು ಠಾಣಾಧಿಕಾರಿಯವರಿಗೆ ನೀಡಿರುತ್ತೇನೆ.

ನನ್ನ ಕತ್ತಿನ ಪಟ್ಟಿ ಹಿಡಿದು ಎಳೆದಾಡಿದ ವ್ಯಕ್ತಿಯ ಹೆಸರು ಮುತ್ತುರಾಜ. ಚೌಡಯ್ಯನವರಿಗೆ ಹಲ್ಲೆ ಮಾಡಿದ ವ್ಯಕ್ತಿಯ ಹೆಸರು ಚೆನ್ನಪ್ಪ, ಆನಂದ ರವರಿಗೆ ಹೊಡೆದ ವ್ಯಕ್ತಿಯ ಹೆಸರು ಮಹೇಶ್ ಬಿನ್ ಮಾಯಿಗಯ್ಯ ಹಾಗೂ ಮಹೇಶ್ ಎಂದು, ರವಿಯವರಿಗೆ ಹಲ್ಲೆ ಮಾಡಿದ ವ್ಯಕ್ತಿಯ ಹೆಸರು ಪುಟ್ಟಸ್ವಾಮಿ ಎಂದು ನಮಗೆ ಬಾತ್ಮಿದಾರರಿಂದ ವಿಚಾರ ಗೊತ್ತಾಗಿರುತ್ತದೆ. ಆನಂತರ ನಾನು ಠಾಣಾಧಿಕಾರಿಗೆ ಮೇಲೆ ತಿಳಿಸಿದ ವ್ಯಕ್ತಿಗಳ ವಿರುದ್ದ ದೂರನ್ನು ನೀಡಿರುತ್ತೇನೆ.

ನಾನು ನೀಡಿದ್ದ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ತಾನು ನೀಡಿದ್ದ ದೂರನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ.6 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.6-ಎ ಎಂದು ಗುರುತಿಸಲಾಯಿತು.

ಸಾಕ್ಷಿಯು ಮಹಜರ್ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದ್ದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.1-ಜಿ ಎಂದು ಗುರುತಿಸಲಾಯಿತು.

ಘಟನಾ ದಿನ ಗಾಮನಹಳ್ಳಿಯಲ್ಲಿ ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿ ಗಲಾಟೆ ಮಾಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಈ ದಿನ ನ್ಯಾಯಾಲಯಕ್ಕೆ 5 ನೇ ಆರೋಪಿ ಗೈರು ಹಾಜರಾಗಿದ್ದು ಆತನ ಗುರುತಿಸುವಿಕೆ ಬಗ್ಗೆ ತಮ್ಮ ತಕರಾರು ಏನು ಇಲ್ಲವೆಂದು ನುಡಿದಿರುತ್ತಾರೆ.

ದಾಳಿಯ ಸಮಯದಲ್ಲಿ ನಾವು ಅಮಾನತ್ತು ಮಹಜರ್ ಕ್ರಮ ಜರುಗಿಸಿ ವಶಪಡಿಸಿಕೊಂಡಿದ್ದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಸದರಿ ವಸ್ತುಗಳನ್ನು ಈಗಾಗಲೇ ಮು.ಮಾಲು.1 ರಿಂದ 5 ಎಂದು ಗುರುತಿಸಲಾಗಿದೆ. ಸಾಕ್ಷಿಯು ಮಹಜರ್ ಕಾಲದಲ್ಲಿ ಮಾಡಲಾಗಿದೆ ಎನ್ನಲಾದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.2 ಮತ್ತು ನಿಪಿ.3 ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ</u>**

ಆರೋಪಿ ಪರ ವಕೀಲರು ಸಾಕ್ಷಿಯ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.